# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1087(1165)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ರಮೇಶ ಬಾಬು (ನಾಮನಿರ್ದೇಶಿತರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **13/03/2026** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕ ಇಲಾಖೆಯ ಅಡಿಯಲ್ಲಿ ಬರುವ ಕಾರ್ಮಿಕ ವಿವಾದದ ನ್ಯಾಯಾಲಯಗಳು ಎಷ್ಟು; ಇವುಗಳಲ್ಲಿ ಎಷ್ಟು ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಹುದ್ದೆ ಖಾಲಿ ಇರುತ್ತದೆ; (ರಾಜ್ಯದಲ್ಲಿರುವ ಕಾರ್ಮಿಕ ವಿವಾದದ ನ್ಯಾಯಾಲಯಗಳ ವಿವರಗಳನ್ನು ಒದಗಿಸುವುದು) | ಯಾವುದೇ ಸಂಸ್ಥೆಗಳಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾದ / ಸೇವೆಯಿಂದ ವಜಾಗೊಳಿಸಲಾದ ಕೈಗಾರಿಕಾ ವಿವಾದಗಳ ಕಾಯ್ದೆ 1947ರ ಷೆಡ್ಯೂಲ್-2 ರಲ್ಲಿ ಬರುವ ವಿವಾದಗಳಿಗೆ ಸಂಬಂಧಿಸಿದಂತೆ ಪ್ರಸ್ತುತ 12 ಕಾರ್ಮಿಕ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಕಾರ್ಮಿಕ ನ್ಯಾಯಾಲಯಗಳ ವಿವರ ಕೆಳಕಂಡಂತೆ ಇರುತ್ತದೆ.<br><br>1. ಪ್ರಧಾನ ಕಾರ್ಮಿಕ ನ್ಯಾಯಾಲಯ, ಬೆಂಗಳೂರು<br>2. 1ನೇ ಅಪರ ಕಾರ್ಮಿಕ ನ್ಯಾಯಾಲಯ, ಬೆಂಗಳೂರು<br>3. 2ನೇ ಅಪರ ಕಾರ್ಮಿಕ ನ್ಯಾಯಾಲಯ, ಬೆಂಗಳೂರು<br>4. 3ನೇ ಅಪರ ಕಾರ್ಮಿಕ ನ್ಯಾಯಾಲಯ, ಬೆಂಗಳೂರು<br>5. ಕಾರ್ಮಿಕ ನ್ಯಾಯಾಲಯ, ವಿಜಯಪುರ<br>6. ಕಾರ್ಮಿಕ ನ್ಯಾಯಾಲಯ, ಬೆಳಗಾವಿ<br>7. ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ<br>8. ಕಾರ್ಮಿಕ ನ್ಯಾಯಾಲಯ, ಕಲಬುರಗಿ<br>9. ಕಾರ್ಮಿಕ ನ್ಯಾಯಾಲಯ, ಚಿಕ್ಕಮಗಳೂರು<br>10. ಕಾರ್ಮಿಕ ನ್ಯಾಯಾಲಯ, ಮಡಿಕೇರಿ<br>11. ಕಾರ್ಮಿಕ ನ್ಯಾಯಾಲಯ, ಮೈಸೂರು<br>12. ಕಾರ್ಮಿಕ ನ್ಯಾಯಾಲಯ, ಮಂಗಳೂರು<br><br>ಮುಂದುವರೆದು, ಕಾರ್ಮಿಕ ನ್ಯಾಯಾಲಯಗಳು ಇಲ್ಲದ ಜಿಲ್ಲೆಗಳಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಗಳು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾದ / ಸೇವೆಯಿಂದ ವಜಾಗೊಳಿಸಲಾದ ವಿವಾದಗಳಿಗೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುತ್ತಿವೆ.<br><br>ಉಳಿದಂತೆ, ಕೈಗಾರಿಕಾ ವಿವಾದಗಳ ಕಾಯ್ದೆ 1947ರ ಷೆಡ್ಯೂಲ್-3 ರಲ್ಲಿ ಬರುವ ವೇತನ/ವಿವಿಧ ಬೇಡಿಕೆಗಳ ಸನ್ನದು/ ಇನ್ನಿತರೆ ಸೇವಾ ವಿಷಯಗಳಿಗೆ |

<table>
<tr><td></td><td></td><td>ಸಂಬಂಧಿಸಿದಂತೆ ಪ್ರಸ್ತುತ 04 ಔದ್ಯಮಿಕ ನ್ಯಾಯಾಧೀಕರಣಗಳು ಕಾರ್ಯ ನಿರ್ವಹಿಸುತ್ತಿವೆ. ಔದ್ಯಮಿಕ ನ್ಯಾಯಾಧೀಕರಣಗಳ ವಿವರ ಕೆಳಕಂಡಂತೆ ಇರುತ್ತದೆ.<br><br>1. ಔದ್ಯಮಿಕ ನ್ಯಾಯಾಧೀಕರಣ, ಬೆಂಗಳೂರು<br>2. ಅಪರ ಔದ್ಯಮಿಕ ನ್ಯಾಯಾಧೀಕರಣ, ಬೆಂಗಳೂರು<br>3. ಔದ್ಯಮಿಕ ನ್ಯಾಯಾಧೀಕರಣ, ಮೈಸೂರು<br>4. ಔದ್ಯಮಿಕ ನ್ಯಾಯಾಧೀಕರಣ, ಹುಬ್ಬಳ್ಳಿ,<br><br>ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಹುದ್ದೆ ಖಾಲಿ ಇರುವ ಬಗ್ಗೆ ಮಾಹಿತಿಯು ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.</td></tr>
<tr><td>ಆ)</td><td>ಕಾರ್ಮಿಕ ಇಲಾಖೆಯಲ್ಲಿ ಪೂರ್ಣ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮತ್ತು ತಾತ್ಕಾಲಿಕ ಅವಧಿಗೆ ಅಥವಾ ಎಂಪ್ಯಾನಲ್ ಮೆಂಟ್ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವಕೀಲರುಗಳು ಎಷ್ಟು; (ಇವರ ವಿವರಗಳನ್ನು ಒದಗಿಸುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳಲ್ಲಿ ಪ್ರಸ್ತುತ ಪೂರ್ಣ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮತ್ತು ತಾತ್ಕಾಲಿಕ ಅವಧಿಗೆ ಅಥವಾ ಎಂಪ್ಯಾನಲ್ ಮೆಂಟ್ ಆಧಾರದ ಮೇಲೆ ಯಾವುದೇ ವಕೀಲರು ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.</td></tr>
<tr><td>ಇ)</td><td>ಕಾರ್ಮಿಕ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಕೀಲರಿಗೆ ನೀಡುತ್ತಿರುವ ಭತ್ಯೆ ಅಥವಾ ವೇತನ ಅಥವಾ ಶುಲ್ಕ ಎಷ್ಟು; (ವಿವರಗಳನ್ನು ಒದಗಿಸುವುದು)</td><td rowspan="2">ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಬಂಧಪಟ್ಟ ಪ್ರಕರಣಗಳನ್ನು ಪ್ರತಿನಿಧಿಸುವ ವಕೀಲರಿಗೆ ಪ್ರಕರಣಕ್ಕೆ ಅನುಗುಣವಾಗಿ ಸೇವಾ ಶುಲ್ಕವನ್ನು ನೀಡಲಾಗುತ್ತಿದೆ.</td></tr>
<tr><td>ಈ)</td><td>ಕಾರ್ಮಿಕ ಇಲಾಖೆಯ ಅಡಿಯಲ್ಲಿ ಇರುವ ಮಂಡಳಿ ಅಥವಾ ಇತರೆ ಇಲಾಖೆಗಳ ಸಂಸ್ಥೆಗಳಲ್ಲಿ ಏಕ ರೀತಿಯ ಶುಲ್ಕವನ್ನು ವಕೀಲರಿಗೆ ಮಾಡಲಾಗುತ್ತಿದೆಯೇ; (ಇಲ್ಲದೆ ಇದ್ದಲ್ಲಿ ಕಾರಣಗಳನ್ನು ತಿಳಿಸುವುದು)</td></tr>
<tr><td>ಉ)</td><td>ಕಾರ್ಮಿಕ ಇಲಾಖೆಯಲ್ಲಿ ಇರುವ ಖಾಯಂ ಕಾನೂನು ಸಲಹೆಗಾರರು ಎಷ್ಟು; (ಇದ್ದಲ್ಲಿ ಅವರ ವಿವರಗಳನ್ನು ಒದಗಿಸುವುದು)</td><td>ಕಾರ್ಮಿಕ ಇಲಾಖೆಯಲ್ಲಿ ಪ್ರಸ್ತುತ ಯಾವುದೇ ಕಾನೂನು ಸಲಹೆಗಾರರು ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.</td></tr>
</table>

**ಕಾಇ 97 ಐಡಿಎಂ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**